ರಘುನಂದನ ದೇಶದ ಪ್ರಮುಖ ರಂಗನಿರ್ದೇಶಕ ಹಾಗೂ ನಾಟಕಕಾರ. ಕಾವ್ಯ ಮತ್ತು ಭಾಷೆಯನ್ನು ಒಂದು ಮೌಲ್ಯದಂತೆ ಹಚ್ಚಿಕೊಂಡಿರುವ ಕವಿ. 'ನಾನು ಸತ್ತಮೇಲೆ' ಅವರ ಕವನ ಸಂಕಲನ. 'ತುಯ್ತವೆಲ್ಲ ನವ್ಯದತ್ತ...' ಕಾವ್ಯ ಮತ್ತು ಲೋಕಮೀಮಾಂಸೆಯ ಪುಸ್ತಕ. 'ಎತ್ತ ಹಾರಿದೆ ಹಂಸ...' ನಾಟಕ.

ಯಾವುದಕ್ಕೋ ಅಣಿ... ಓ, ಕತ್ತಲಿಳಿಯುತ್ತಿದೆ... ಗೂಬೆಯ ಗುಮ್... ರೆಸ್ಟು ಮಾಡುವ ಹೊತ್ತು, ಕಾಡಿಗೆ... ರೆಸ್ಟಿಗೆ ಅಣಿ... ಕತ್ತಲ ಬಯಕೆಯ ರಾಗ... ಕಾಮೋದ...

ಆದರೆ, ಹೆದರಿಕೆ ನಿಮಗೆ... ಕತ್ತಲಿಳಿಯುತ್ತಿದೆ... ಮಬ್ಬು. ಅರೆ... ಅವಳೂ ಬೆಚ್ಚಿದ್ದಾಳೆ... ಹೆದರಿಕೆ ಅವಳಿಗೂ... ಅವಳಿಗೇನೆ...

ಊರು ಸೇರುವ ತವಕ ನಿಮಗೆ... ಆದರೆ, ಅವಳು... ಊರದಾರಿ ಯಾವುದು, ಕೇಳುವುದಿಲ್ಲ ಅವಳು... ಊರು ಬೇಡವೊ, ಅವಳಿಗೆ...?

ಬಿಡು, ಬೇಡ... ಆದರೆ ಹೆದರಬೇಡ, ತಾಯಿ... ಇಗೊ, ಹಸುವಿನ ಕೊರಳ ಗಂಟೆ... ಕಿಣಿ, ಕಿಣಿ... ಅಬ್ಬ... ಊರು, ಜನ ದೂರವಿಲ್ಲ, ಹಾಗಾದರೆ...

ಅರೆ, ಇದೇನು, ಈಗಲೂ ಭಯವೇ, ತಾಯಿ...

ಸರಿ, ಊರು ಬೇಡ, ಬಿಡು... ದೂರದಿಂದಲೇ ನೋಡು... ಬೆಟ್ಟದಡಿ ಅಗೋ ಕೆರೆಯ ಬಳಿ, ಮಬ್ಬಿನಲ್ಲಿ ಮನೆ... ಯಾರಿದ್ದಾರೋ ಅಲ್ಲಿ... ಅಂತೂ ಚೂರು ಉಸಿರು ಬಂತು ನನಗೆ... ಆದರೆ, ನಿನಗೆ... ಓ, ಊರು ಬೇಡವೇ ಬೇಡ, ಅಲ್ಲವೇ...

ಹಕ್ಕಿ... ಸುಂಯ್ಯ, ಸುಂಯ್ಯ... ಬಂಡಿಯ ಗಾಲಿ ಕಿರ್ರ್, ಕಿರ್ರ್... ತಂತಮ್ಮ ಗೂಡಿನತ್ತ ಎಲ್ಲ... ಇನ್ನು ನಾನೂ ಗೂಡಿನತ್ತ, ಆ ಊರಿನತ್ತ...

ಮತ್ತು ನೀನು? ಓ, ದೂ ರ ಕಾಡಿನಲ್ಲಿ ಏನೊ ಸಪ್ಪಳ... ನಿನ್ನದೇ ಸಪ್ಪಳ ಅದು... ನಿನ್ನ ಮನಸ್ಸೆಲ್ಲ ಅತ್ತಲೇ...

ಹೊರಟೆ, ತಾಯಿ, ನಾನು... ಆಗೊ, ಹಸುವ ಕರೆಯುತಿದ್ದಾನೆ ಯಾರೋ: 'ನಂದಿನೀ'... ಕಣಿವೆ, ಸಂಜೆ ಒಂದಾಗಿ ಕರಗಿ ಕಪ್ಪಾಗುವ ಮುನ್ನ ಸೇರಬೇಕು ನಾನು ಮನೆಗೆ, ಅರಣ್ಯಾನಿ...

ಮತ್ತು, ನೀನು? ...

ಓ... ... ಈಗ ಗೊತ್ತಾಯಿತು, ಅಯ್ಯೋ: ನೀ ಹೆದರಿದ್ದು ನನ್ನ ಕಂಡು... ನನ್ನಂಥವರ ಕಂಡು... ನಾವು ನಿನ್ನಲ್ಲಿಗೆ ಬಂದಾಗ, ಆಗ, ಆಗ ಹೆದರುತ್ತೀ...

ಸನಿಹದಲ್ಲೇ ಹಾದುಹೋಗುತ್ತೀ... ಆದರೆ ಕೇಡು ಮಾಡುವುದಿಲ್ಲ... ನಾವು ಮಾಡುವ ಕೇಡಿಗೆ ಹೆದರುತ್ತೀ... ದೂರ ಸರಿಯುತ್ತೀ... ಆದರೂ, ಆದರೂ ಕೇಡು ಮಾಡಿದರೆ ನಾವು...

ಅಯ್ಯೋ... ಎಲ್ಲ... ಎಲ್ಲವುದಕ್ಕೂ ನೀನೇ, ನೀನೇ ತಾಯಿ, ಅಲ್ಲವೇ, ಅಮ್ಮ?

ಕೈಮುಗಿದೆ ಇಗೋ, ಹಾಡಿದೆ ನಿನ್ನೊಳಿತ ಕುರಿತು... ನಿನ್ನ, ಮಾತಿಲ್ಲದ, ಈ ತಾಳಿಕೆ; ನೀನು ಎದೆಯಲ್ಲಿ ಕಾಪಿಟ್ಟ ಸದ್ದು; ನಿನ್ನ ಮಡಿಲಲ್ಲಿ ಸಲಹಿರುವ ಎಲ್ಲ ಬೆಡಗಿಗೂ... ಒಮ್ಮೆ... ಈಗ... ಈ ಹಾಡು... ಈ ಸ್ತುತಿ...

* * *

ಅಚ್ಚಾದ ಕವಿತೆಯ ಕೆಳಗೆ, 'ಋಗ್ವೇದಿಂದ' ಎಂಬ ಮಾತಿದೆ. ಆ ವೇದದ ಹತ್ತನೇ ಮಂಡಲದ ನೂರಾನಲವತ್ತಾರನೆಯ ಸೂಕ್ತ ಈ ಕವಿತೆಯ ಭಾವಕ್ಕೆ ಆಧಾರ. ಇಲ್ಲಿ ಆ ಸೂಕ್ತದಲ್ಲಿಲ್ಲದ ಮತ್ತೇನೇನೋ ಸೇರಿ, ಅಲ್ಲಿಲ್ಲದ ತಿಳಿ-ನಿಚ್ಚಳವು ಕೂಡಿ, ಇದು ಕನ್ನಡದ ಋಕ್ಕು ತಾನಾಗಿದೆ.

ಕನ್ನಡದಲ್ಲಿ ಹೇಳಲು ಮಾತು ಸಿಕ್ಕಲಿಲ್ಲ; ಆದ್ದರಿಂದ ಇಂಗ್ಲಿಷಿನ ಮಾತಿಟ್ಟು ಹೇಳುತ್ತಿದ್ದೇನೆ: ಇಷ್ಟು ಡೆಲಿಕೇಟ್ ಆಗಿರುತ್ತ, ಇಷ್ಟು ಆಳವಾದ ಫೀಲಿಂಗ್ ಇರುವ, ಇಷ್ಟೊಂದು ಬಗೆಯ ಮಾತಿನ ದನಿ, ಪಲುಕಿನ ತಿರುವು ಇರುವ, ಛಂದಸ್ಸು ಮತ್ತು ಲಯದ ಮೇಲೆ ಇಷ್ಟೊಂದು ಹತೋಟಿ ಇರುವ, ಇಷ್ಟು ಸರಳವಾದ, ಇಷ್ಟು ಕಡಿಮೆ ಮಾತಲ್ಲಿ ಇಷ್ಟನ್ನೆಲ್ಲ ಉಕ್ಕಿಸುವ ಬೇರೊಂದು ಕವಿತೆ ನಾನಂತೂ ಕಾಣೆ. ಇದನ್ನು ಬರೆದ ಕವಿ ಧನ್ಯ. ದಿನಾಲೂ ನೆನೆವ ನಾನು ಧನ್ಯ, ನಿತ್ಯ ಧನ್ಯ. ಬಿಡಿ, ಬಣ್ಣನೆಯ ಆ ಮಾತು... ಕವಿತೆಯನ್ನೇ ಓದಿಕೊಳ್ಳಿ, ಮತ್ತೆ, ಮತ್ತೆಮತ್ತೆ... ತುಟಿ ತೆರೆದು, ಮೆತ್ತಗೆ... ತುಂಬುಗೊರಳಲ್ಲಿ, ಭಾವದಲ್ಲಿ... ಮೆತ್ತಗೆ. ಅದಕ್ಕೆ ಅದೇ ಸಾಟಿ.

* * *

**ಕಡೆಯ ಮಾತು:** ಆ ಅರಣ್ಯಾನಿಯೇ ನಮ್ಮ ಬನಶಂಕರಿ; ವನದೇವತೆ; ಬಂಗಾಳದ ಬನಬೀಬೀ; ವನದುರ್ಗೆ; ಮತ್ತಿನ್ನೂ ಬೇರೆಬೇರೆ ಕಡೆ ಬೇರೆಬೇರೆ ಹೆಸರಿನ ಅಮ್ಮ. ನಾವೆಲ್ಲ ಸೇರಿ ನಮ್ಮೀ ಅಮ್ಮನಿಗೆ ಏನು ಮಾಡುತ್ತಿದ್ದೇವೆ, ಯಾವ ದೆಸೆಗೆ ತಳ್ಳಿದ್ದೇವೆ ಅವಳ, ನೋಡಿಕೊಳ್ಳೋಣ.●

